

بسم اللهِ الرّحمٰن الرّحيم

# ಹಝ್ರತ್ ಉಮರ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **23–04–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾನು ಹಝ್ರತ್ ಉಮರ್ ಬಿನ್ ಖತ್ತಾಬ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪಿಸುವೆನು. ಅವರು ಬನೂ ಅದ್ದೀ ಬಿನ್ ಕಅ್‌ಬ್ ಬಿನ್ ಲುಅ ಗೋತ್ರದವರಾಗಿದ್ದರು. ಅವರ ತಂದೆಯ ಹೆಸರು ಖತ್ತಾಬ್ ಬಿನ್ ನಫೀಲ್ ಎಂದಾಗಿತ್ತು ಮತ್ತು ತಾಯಿಯ ಹೆಸರು ಹಂತಮ ಬಿನ್ತ್ ಹಾಶಿಂ ಎಂದಾಗಿತ್ತು. ಹಝ್ರತ್ ಉಮರ್(ರ)ರ ಜನನ ತಾರೀಕಿನ ಬಗ್ಗೆ ವಿವಿಧ ವರದಿಗಳು ಬಂದಿವೆ. ಉದಾಹರಣೆಗೆ, ಒಂದು ಅಭಿಪ್ರಾಯ ಪ್ರಕಾರ ಹಝ್ರತ್ ಉಮರ್(ರ) ದೊಡ್ಡ ಫುಜ್ಜಾರ್ ಯುದ್ಧಕ್ಕೆ ನಾಲ್ಕು ವರ್ಷಗಳಿಗೆ ಮುಂಚೆ ಜನಿಸಿದ್ದರು. ಬೇರೊಂದು ಅಭಿಪ್ರಾಯ ಪ್ರಕಾರ ಆ ಯುದ್ಧದ ನಾಲ್ಕು ವರ್ಷಗಳ ನಂತರ ಜನಿಸಿದ್ದರು ಎಂದು ಇದೆ. ಮತ್ತೊಂದು ವರದಿಯ ಪ್ರಕಾರ ಅವರ ಜನನದ ವರ್ಷ ಕಅ್‌ಬದ ಮೇಲೆ ದಾಳಿ ಮಾಡಲು ಅಬ್ರಹತ್ ಬಂದಿದ್ದ ಕ್ರಿ.ಶ. 570ರ ಹದಿಮೂರು ವರ್ಷಗಳ ನಂತರ ಎಂದರೆ ಕ್ರಿ.ಶ. 583 ಎಂದು ಸಹ ಬಂದಿದೆ. ಒಂದು ವರದಿಯ ಪ್ರಕಾರ ಹಝ್ರತ್ ಉಮರ್(ರ) ನಬವೀ ವರ್ಷ 6ರಲ್ಲಿ 26ನೇ ವಯಸ್ಸಿನಲ್ಲಿ ಇಸ್ಲಾಂ ಧರ್ಮ ಸ್ವೀಕರಿಸಿದ್ದರು ಎಂದಿದೆ. ಇದರ ಪ್ರಕಾರ ಅವರ ಜನನದ ವರ್ಷ ಕ್ರಿ.ಶ. 590 ಆಗುತ್ತದೆ. ಮತ್ತೊಂದು ವರದಿಯಿದೆ, ಅದರ ಪ್ರಕಾರ ಹಝ್ರತ್ ಪೈಗಂಬರ್(ಸ)ರಿಗೆ 21 ವರ್ಷ ಪ್ರಾಯವಿದ್ದಾಗ ಹಝ್ರತ್ ಉಮರ್(ರ) ಜನಿಸಿದ್ದರು ಎಂದಿದೆ. ಹಝ್ರತ್ ಉಮರ್(ರ)ರ ಉಪನಾಮ ಅಬೂಹಫ್ಸ್ ಎಂದಾಗಿತ್ತು.

ಒಂದು ಬಾರಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರೊಡನೆ ಹಝ್ರತ್ ಇಬ್ನು ಅಬ್ಬಾಸ್(ರ) ಕೇಳಿದರು: ನಿಮಗೆ **"ಫಾರೂಖ್"** ಎಂಬ ನಾಮ ಹೇಗೆ ಲಭಿಸಿತು? ಹಝ್ರತ್ ಉಮರ್(ರ) ಹೇಳಿದರು: ಹಝ್ರತ್ ಹಂಝ(ರ) ಇಸ್ಲಾಮ್ ಧರ್ಮ ಸ್ವೀಕರಿಸಿ ಮಸ್ಜಿದ್ ಹರಾಮ್‌ನಲ್ಲಿ ಅಬೂಜಹಲ್‌ನನ್ನು ಬಿಲ್ಲಿನಿಂದ ಹಲ್ಲೆ ನಡೆಸಿ ಗಾಯಗೊಳಿಸಲಾದ ಮೂರನೇ ದಿನ ನಾನು ಮನೆಯಿಂದ ಹೊರಗೆ ಬಂದೆನು. ನನ್ನ ಸಹೋದರಿ ಮತ್ತು ಅವಳ ಪತಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದಾರೆ ಎಂಬ ಸುದ್ದಿ ಮಾರ್ಗ ಮಧ್ಯೆ ಭೇಟಿಯಾದ ಬನೂ ಮಖ್‌ಝೂಮ್‌ನ ಒಬ್ಬ ವ್ಯಕ್ತಿಯಿಂದ ನನಗೆ ಲಭಿಸಿತು. ಹಾಗೆ ನಾನು ನನ್ನ ಸಹೋದರಿಯ ಮನೆಗೆ ಹೋದೆನು. ಅಲ್ಲಿ ಏನೋ ಮೆಲುಧ್ವನಿಯಲ್ಲಿ ಓದುತ್ತಿರುವುದಾಗಿ ನಾನು ಆಲಿಸಿದೆ. ನಾನು ಒಳಗೆ ಪ್ರವೇಶಿಸಿದೆ. ಅಲ್ಲಿ ಮಾತುಕತೆ ಮುಂದುವರೆದಾಗ ನಾನು ನನ್ನ ಭಾವನ ತಲೆಯನ್ನು ಹಿಡಿದುಕೊಂಡು ಅವನನ್ನು ಹೊಡೆದು ರಕ್ತಸಿಕ್ತಗೊಳಿಸಿದೆ. ಮತ್ತೊಂದು ವರದಿಯಲ್ಲಿ ಸಹೋದರಿ ಗಾಯಗೊಂಡಿದ್ದಾಗಿ ಸಹ ಪ್ರಸ್ತಾಪ ಲಭಿಸುತ್ತದೆ. ರಕ್ತ ಸುರಿಯುತ್ತಿರುವುದನ್ನು ಕಂಡು ನಾನು ಲಜ್ಜಿತನಾದೆನು. ನಾನು ಕುಳಿತುಕೊಂಡೆನು. ನೀವು ಓದುತ್ತಿದ್ದ ಗ್ರಂಥವನ್ನು ನನಗೆ ತೋರಿಸು ಎಂದು ನಾನು ಹೇಳಿದೆ. ಮೊದಲು ನೀನು ಸ್ನಾನ ಮಾಡು ಎಂದು ನನ್ನ ಸಹೋದರಿ ನನ್ನೊಡನೆ ಹೇಳಿದಳು. ನಾನು ಸ್ನಾನ ಮಾಡಿ ಬಂದಾಗ ಅವರು ನನಗಾಗಿ ಆ ಪುಟಗಳನ್ನು ತೆಗೆದರು. ಅವು ಸೂರಃ ತಾಹಾದ 2ರಿಂದ 9ರ ವರೆಗಿನ ವಚನಗಳಾಗಿದ್ದುವು. ಅದರ ಮಹಿಮೆಯ ಪ್ರಭಾವ ನನ್ನ ಹೃದಯದಲ್ಲಿ ಆಳವಾಗಿ ಉಂಟಾಯಿತು. ನಾನು ಕೂಡಲೇ ಅಲ್ಲಿಂದ ದಾರುಲ್ ಅರ್ಖಮ್‌ಗೆ ಹೋದೆನು ಮತ್ತು ಹಝ್ರತ್ ಪೈಗಂಬರ್(ಸ)ರ ಮುಂದೆ ಹಾಜರಾಗಿಕೊಂಡು ಇಸ್ಲಾಂ ಧರ್ಮವನ್ನು ಸ್ವೀಕರಿಸಿದೆನು. ಆಗ ಎಲ್ಲ ಸಹಾಬಿಯರು **"ಅಲ್ಲಾಹು ಅಕ್ಬರ್"** ಎಂದು ಜೋರಾಗಿ ಹೇಳಿದರು. ಅದನ್ನು ಮಕ್ಕಾ ನಿವಾಸಿಗಳು ಕೇಳಿದರು. ಅನಂತರ ನಾವು ಎರಡು ಪಂಕ್ತಿಗಳಲ್ಲಿ ಮಸ್ಜಿದ್ ಹರಾಮನ್ನು ಪ್ರವೇಶಿಸಿದೆವು. ಒಂದು ಪಂಕ್ತಿಯಲ್ಲಿ ನಾನಿದ್ದೆ, ಮತ್ತೊಂದು ಪಂಕ್ತಿಯಲ್ಲಿ ಹಝ್ರತ್ ಹಂಝ ಇದ್ದರು. ಖುರೈಶಿಯರು ನನ್ನನ್ನು ಮತ್ತು ಹಂಝರನ್ನು ಕಂಡಾಗ, ಅವರಿಗೆ ಹಿಂದೆಂದೂ ಉಂಟಾಗದಂತಹ ಅತಿಯಾದ ದುಃಖ ಮತ್ತು ನೋವು ಉಂಟಾಯಿತು. ಆ ದಿನದಂದು ಹಝ್ರತ್ ಪೈಗಂಬರ್(ಸ) ನನಗೆ **"ಫಾರೂಖ್"** ಎಂಬ ಹೆಸರು ಇರಿಸಿದರು. ಎಂದರೆ ಸತ್ಯ ಮತ್ತು ಅಸತ್ಯದ ನಡುವೆ ವ್ಯತ್ಯಾಸ ಉಂಟುಮಾಡುವವನು. ವರದಿಯ ಪ್ರಕಾರ ದಾರುಲ್‌ಅರ್ಖಮ್‌ನಲ್ಲಿ ಇಸ್ಲಾಂ ಧರ್ಮ ಸ್ವೀಕರಿಸಿದ ಕೊನೆಯ ವ್ಯಕ್ತಿ ಹಝ್ರತ್ ಉಮರ್(ರ) ಆಗಿದ್ದರು.

ಕುದುರೆ ಸವಾರಿ ಮತ್ತು ಕುಸ್ತಿಯಲ್ಲಿ ನಿಪುಣರಾಗಿದ್ದ, ಉದ್ದ ಮತ್ತು ಸುದೃಢ ಮೈಕಟ್ಟಿನ ಹಝ್ರತ್ ಉಮರ್(ರ) ಓದುಬರಹ ಗೊತ್ತಿದ್ದ ಖುರೈಶಿನ 17 ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಇಸ್ಲಾಂ ಧರ್ಮ ಸ್ವೀಕಾರಕ್ಕೆ ಮುಂಚೆ ಖುರೈಶಿಗಳ ಪರವಾಗಿ ರಾಯಭಾರಿಯ ಹುದ್ದೆ ಅವರಿಗೆ ವಹಿಸಲಾಗಿತ್ತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ)ರಿಗೆ ಇಸ್ಲಾಮ್‌ನೊಂದಿಗೆ ಕಠಿಣವಾದ ವಿರೋಧವಿತ್ತು. ಆದರೆ ಅವರಲ್ಲಿ ಆಧ್ಯಾತ್ಮಿಕ ಯೋಗ್ಯತೆ ಸಹ ಇತ್ತು. ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರಿಗೆ ತೊಂದರೆ ಕೊಡುತ್ತಿದ್ದರೂ ಕೂಡ ಅವರೊಳಗೆ ಅನುಕಂಪದ ಗುಣ ಸಹ ಇತ್ತು. ಉದಾಹರಣೆಗೆ, ಅಬಿಸೀನಿಯಾಕ್ಕೆ

ನವಮುಸ್ಲಿಮರು ವಲಸೆ ಹೋದ ರಾತ್ರಿ, ನಸುಕಿನ ಸಮಯದಲ್ಲಿ ಹಝ್ರತ್ ಉಮರ್(ರ) ಮಕ್ಕದಲ್ಲಿ ಸುತ್ತಾಡುತ್ತಿದ್ದರು. ಒಬ್ಬ ಸಹಾಬಿ ಸ್ತ್ರೀ ಯಾತ್ರೆಯ ತಯಾರಿಯೊಂದಿಗೆ ಎಲ್ಲಿಗೋ ಹೋಗುತ್ತಿರುವುದನ್ನು ಅವರು ಕಂಡರು. ಅದರ ಬಗ್ಗೆ ಕೇಳಿದಾಗ ಆ ಸಹಾಬಿಯ ಹೇಳಿದರು: ಹೇ ಉಮರ್, ನಾವು ಇಲ್ಲಿರುವುದನ್ನು ನೀನು ಮತ್ತು ನಿನ್ನ ಸಹೋದರರು ಇಷ್ಟಪಡದ ಕಾರಣದಿಂದ ನಾವು ಊರು ಬಿಟ್ಟು ಹೋಗುತ್ತಿದ್ದೇವೆ. ಏಕದೇವನನ್ನು ಆರಾಧಿಸಲು ಇಲ್ಲಿ ನಮಗೆ ಸ್ವಾತಂತ್ರ್ಯವಿಲ್ಲ. ಈ ಉತ್ತರವನ್ನು ಆಲಿಸಿದಾಗ ಹಝ್ರತ್ ಉಮರ್(ರ)ರ ಹೃದಯದಲ್ಲಿ ಎಷ್ಟು ಅನುಕಂಪ ಉಂಟಾಯಿತೆಂದರೆ, ಅವರು ತಮ್ಮ ಮುಖವನ್ನು ತಿರುಗಿಸುತ್ತಾ ಹೇಳಿದರು: 'ಸರಿ, ಹೋಗಿರಿ, ದೇವನು ನಿಮ್ಮ ಸಂರಕ್ಷಕನಾಗಿರಲಿ.'

ಹಝ್ರತ್ ಉಮರ್(ರ) ಇಸ್ಲಾಂ ಸ್ವೀಕರಿಸುವಂತೆ ಆಗಲು ಹಝ್ರತ್ ಪೈಗಂಬರ್(ಸ) ಈ ದುಆ ಸಹ ಮಾಡಿದ್ದರು: 'ಹೇ ಅಲ್ಲಾಹ್, ಇಬ್ಬರು ವ್ಯಕ್ತಿಗಳಲ್ಲಿ, ಎಂದರೆ ಅಬೂಜಹಲ್ ಮತ್ತು ಉಮರ್ ಬಿನ್ ಖಿತ್ತಾಬ್‌ರಲ್ಲಿ ನಿನಗೆ ಹೆಚ್ಚು ಪ್ರಿಯರಾದ ವ್ಯಕ್ತಿಯ ಮೂಲಕ ಇಸ್ಲಾಮಿಗೆ ಗೌರವ ನೀಡು'. ಧುಲ್‌ಹಜ್ಜ್ 6 ನಬವಿಯಲ್ಲಿ ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸುವಾಗ ಮಕ್ಕದಲ್ಲಿ ಮುಸ್ಲಿಮರಾದ ಪುರುಷರ ಸಂಖ್ಯೆ ನಲ್ವತ್ತಾಗಿತ್ತು. ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ ಹಝ್ರತ್ ಜಿಬ್ರೀಲ್(ಅ) ಇಳಿದುಬಂದು ಹಝ್ರತ್ ಪೈಗಂಬರ್(ಸ)ರನ್ನು ಸಂಬೋಧಿಸುತ್ತಾ ಹೇಳಿದರು: ಹೇ ಮುಹಮ್ಮದ್, ಹಝ್ರತ್ ಉಮರ್(ರ) ಇಸ್ಲಾಂ ಸ್ವೀಕರಿಸಿದ ಕಾರಣದಿಂದ ಆಕಾಶದವರು ಸಹ ಸಂತೋಷಗೊಂಡಿರುವರು.

ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಅಂಗೀಕರಿಸಲು ಕಾರಣವೇನೆಂಬುದರ ಕುರಿತು ಹಲವಾರು ಘಟನೆಗಳು ಮತ್ತು ವರದಿಗಳು ಹದೀಸ್ ಮತ್ತು ಚರಿತ್ರೆಯ ಗ್ರಂಥಗಳಲ್ಲಿ ಬಂದಿವೆ. ಒಂದು ವರದಿ ಪ್ರಕಾರ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರನ್ನು ಕೊಲ್ಲುವ ವ್ಯಕ್ತಿಗೆ ಹಿರಿದಾದ ಕೊಡುಗೆಯನ್ನು ನೀಡುವುದಾಗಿ ಅಬೂಜಹಲ್ ಘೋಷಿಸಿದಾಗ, ಹಝ್ರತ್ ಪೈಗಂಬರ್(ಸ)ರನ್ನು ಕೊಲ್ಲುವ ಉದ್ದೇಶದಿಂದ ಹಝ್ರತ್ ಉಮರ್(ರ) ತೆರೆದ ಖಡ್ಗದೊಂದಿಗೆ ಹೊರಟರು. ಮಾರ್ಗ ಮಧ್ಯೆ ಒಂದು ಕರುವನ್ನು ಕೊಯ್ಯುತ್ತಿರುವುದಾಗಿ ಅವರು ಕಂಡರು. ಅದರ ಹೊಟ್ಟೆಯಿಂದ ಹೀಗೆ ಶಬ್ದ ಬರುತ್ತಿತ್ತು: "ಹೇ ಧರೀಹ್‌ನ ಜನರೇ, ಓರ್ವ ಕರೆ ನೀಡುವವನು ಅಲ್ಲಾಹನ ಏಕತ್ವ ಮತ್ತು ಹಝ್ರತ್ ಪೈಗಂಬರ್(ಸ)ರ ಪ್ರವಾದಿತ್ವದ ಬಗ್ಗೆ ಸಾಕ್ಷ್ಯ ನೀಡಲು ಕರೆಯುತ್ತಿದ್ದಾನೆ." ಧರೀಹ್ ಎಂಬುದು ಆ ಕರುವಿನ ಹೆಸರಾಗಿತ್ತು. ಇದು ನನ್ನ ಕಡೆಗೆ ಇರುವ ಸೂಚನೆಯಾಗಿದೆ ಎಂದು ಹಝ್ರತ್ ಉಮರ್(ರ) ಯೋಚಿಸಿದರು.

ಈ ವರದಿ ಸರಿಯೇ ಆಗಿದ್ದರೆ, ಅದು ಹಝ್ರತ್ ಉಮರ್(ರ) ಅಲ್ಲಿ ಆ ಸಂದರ್ಭದಲ್ಲಿ ಕಂಡ ಒಂದು ದಿವ್ಯದರ್ಶನ ವಾಗಿರಬಹುದು.

ಮತ್ತೊಂದು ವರದಿ ಹೀಗೆ ಬಂದಿದೆ: ಒಂದು ರಾತ್ರಿ ಮಸ್ಜಿದ್ ಹರಾಮ್‌ನಲ್ಲಿ ಹಝ್ರತ್ ಪೈಗಂಬರ್(ಸ) ನಮಾಝ್‌ನಲ್ಲಿ ಮಗ್ನರಾಗಿರುವುದನ್ನು ಹಝ್ರತ್ ಉಮರ್(ರ) ಕಂಡರು. ಹಝ್ರತ್ ಪೈಗಂಬರ್(ಸ) **'ಸೂರಃ ರಹ್ಮಾನ್'** ಪಾರಾಯಣ ಮಾಡುತ್ತಿದ್ದರು. ಹಝ್ರತ್ ಉಮರ್(ರ) ಹೇಳುತ್ತಾರೆ: ಪವಿತ್ರ ಖುರ್‌ಆನಿನ ವಚನಗಳನ್ನು ಆಲಿಸಿದ ಕಾರಣದಿಂದ ನನ್ನ ಹೃದಯ ಕರಗಿತು ಮತ್ತು ನಾನು ಅತ್ತುಬಿಟ್ಟೆ ಹಾಗೂ ನನ್ನೊಳಗೆ ಇಸ್ಲಾಂ ಧರ್ಮ ಪ್ರವೇಶಿಸಿತು.

ಇಂತಹದ್ದೇ ಮತ್ತೊಂದು ವರದಿಯಲ್ಲಿ ಹಝ್ರತ್ ಉಮರ್(ರ) ಹೇಳುತ್ತಾರೆ: ಒಂದು ರಾತ್ರಿ ನನ್ನ ಸಹೋದರಿಗೆ ಪ್ರಸವ ವೇದನೆ ಉಂಟಾಯಿತು. ನಾನು ಪ್ರಾರ್ಥನೆ ಮಾಡಲಿಕ್ಕಾಗಿ ಕಅ್‌ಬದ ಪರದೆಗಳೊಂದಿಗೆ ಸೇರಿ ನಿಂತೆನು. ಆಗ ಹಝ್ರತ್ ಪೈಗಂಬರ್(ಸ) ನಮಾಝ್‌ನಲ್ಲಿ ಪವಿತ್ರ ಖುರ್‌ಆನ್ ವಚನಗಳನ್ನು ಓದುತ್ತಿರುವುದಾಗಿ ಕಂಡೆನು. ಆ ವಚನಗಳು ಹಝ್ರತ್ ಉಮರ್(ರ)ರ ಹೃದಯಲ್ಲಿ ಎಂತಹ ಪ್ರಭಾವ ಬೀರಿತ್ತೆಂದರೆ, ಹಝ್ರತ್ ಪೈಗಂಬರ್(ಸ) ಅಲ್ಲಿಂದ ಹೊರಟಾಗ, ಹಝ್ರತ್ ಉಮರ್(ರ) ಅವರನ್ನು ಹಿಂಬಾಲಿಸಲು ತೊಡಗಿದರು. ಹಝ್ರತ್ ಪೈಗಂಬರ್(ಸ) ಇದನ್ನು ಕಂಡಾಗ ಹೇಳಿದರು: ಹೇ ಉಮರ್, ನೀನು ನನ್ನನ್ನು ಹಗಲು – ರಾತ್ರಿ ಸತಾಯಿಸುತ್ತೀಯ. ಇದನ್ನು ಕೇಳಿದಾಗ, ಹಝ್ರತ್ ಪೈಗಂಬರ್(ಸ) ಅವರ ವಿರುದ್ಧ ಶಾಪ ಪ್ರಾರ್ಥನೆ ಮಾಡುವರೇ ಎಂದು ಅವರು ಹೆದರಿದರು. ಕೂಡಲೇ ಅವರು ಶಹಾದತ್ ಕಲಿಮ ಉಚ್ಚರಿಸಿದರು.

ಇನ್ನೊಂದು ವರದಿಯಲ್ಲಿ ಹಝ್ರತ್ ಉಮರ್(ರ)ರ ಇಸ್ಲಾಂ ಸ್ವೀಕಾರದ ಬಗ್ಗೆ ಹೀಗೆ ಬಂದಿದೆ: ಒಂದು ದಿನ ಹಝ್ರತ್ ಪೈಗಂಬರ್(ಸ) **'ಸೂರಃ ಅಲ್‌ಹಾಖ್ಖ'** ಪಾರಾಯಣ ಮಾಡುತ್ತಿರುವುದಾಗಿ ಹಝ್ರತ್ ಉಮರ್(ರ) ಆಲಿಸಿದರು. ಪವಿತ್ರ ಖುರ್‌ಆನಿನ ವಚನಗಳ ರಚನೆ ಮತ್ತು ವಿನ್ಯಾಸದಿಂದ ಆಶ್ಚರ್ಯಗೊಂಡು ಅವರು ಯೋಚಿಸಿದರು: ದೇವನಾಣೆ, ಇದಂತು ಒಬ್ಬ ಕವಿಯ ವಚನಗಳಾಗಿವೆ. ನಾನು ಹೀಗೆ ಯೋಚಿಸುತ್ತಿರುವಾಗಲೇ ಹಝ್ರತ್ ಪೈಗಂಬರ್(ಸ) ಈ ವಚನಗಳನ್ನು ಓದಿದರು: **ಇನ್ನಹೂ ಲಖೌಲು ರಸೂಲಿನ್ ಕರೀಮಿನ್, ವಮಾ ಹುವ ಬಿಖೌಲಿ ಶಾಇರಿನ್....** ಎಂದರೆ, 'ದಿಟವಾಗಿಯೂ, ಇದು ಓರ್ವ ಆದರಣೀಯ ಪ್ರವಾದಿಯ ವಚನವಾಗಿದೆ. ಇದು ಒಬ್ಬ ಕವಿಯ ವಚನವಲ್ಲ.' ಹಝ್ರತ್ ಉಮರ್(ರ) ಹೇಳುತ್ತಾರೆ: ಇವರು ಒಬ್ಬ ಕಣಿ ಹೇಳುವವ ಅಥವಾ ಜಾದೂಗಾರ ಎಂದು ನಾನು ಆಗ ಯೋಚಿಸಿದೆ. ಅಷ್ಟರಲ್ಲಿ ಹಝ್ರತ್ ಪೈಗಂಬರ್(ಸ) ಹೀಗೆ ಓದಿದರು: **ವಲಾ ಬಿಖೌಲಿ ಕಾಹಿನಿನ್. ಖಲೀಲಮ್ಮಾ ತಧಕ್ಕರೂನ್**. ಎಂದರೆ, 'ಇದು ಒಬ್ಬ ಕಣಿ ಹೇಳುವವನ ಮಾತೂ ಅಲ್ಲ; ಆದರೆ ನೀವು ಉಪದೇಶವನ್ನು ಕಡೆಗಣಿಸುತ್ತೀರಿ.' ಹಝ್ರತ್ ಉಮರ್(ರ) ಹೇಳುತ್ತಾರೆ: ಅಂದಿನಿಂದ ಇಸ್ಲಾಂ ನನ್ನ ಹೃದಯದೊಳಗೆ ಪ್ರವೇಶಿಸಿತ್ತು.

(ಹಝ್ರತ್ ಉಮರ್(ರ)ರ ಇಸ್ಲಾಂ ಸ್ವೀಕಾರದ ವಿಭಿನ್ನ ವರದಿಗಳ ಕುರಿತು ವಿವರಣೆ ನೀಡುತ್ತಾ ಹುಝೂರ್ ಹೇಳಿದರು:) ಇತಿಹಾಸ ಮತ್ತು ಜೀವನ ಚರಿತ್ರೆಯ ಗ್ರಂಥಗಳಲ್ಲಿ ಅನೇಕ ತರದ ವರದಿಗಳು ಲಭಿಸುತ್ತಿವೆ. ಅವುಗಳಲ್ಲಿ ಪ್ರಬಲವೆಂದು ತಿಳಿಯಲಾದ

ವರದಿಗಳನ್ನು ನಾನು ಇಲ್ಲಿ ವಿವರಿಸಿದ್ದೇನೆ. ಹಝ್ರತ್ ಉಮರ್[ರ] ತನ್ನ ಸಹೋದರಿ ಮತ್ತು ಭಾವನ ಮನೆಗೆ ಹೋಗಿ, ಅಲ್ಲಿಂದ ದಾರೇ ಅರ್ಖಮ್‌ಗೆ ಹೋದ ಘಟನೆಯ ವರದಿಯನ್ನೇ ನಾವು ಸರಿ ಮತ್ತು ಪ್ರಬಲವೆಂದು ಭಾವಿಸುತ್ತೇವೆ. ಮೇಲೆ ಪ್ರಸ್ತಾಪಿಸಲಾದ ಎಲ್ಲ ವರದಿಗಳು ಅವುಗಳ ಸ್ಥಾನಗಳಲ್ಲಿ ಸರಿಯೇ ಆಗಿರಬಹುದು. ವಿವಿಧ ಸಂದರ್ಭಗಳಲ್ಲಿ ಹಝ್ರತ್ ಉಮರ್[ರ]ರ ಹೃದಯದಲ್ಲಿ ಬದಲಾವಣೆಗಳು ಉಂಟಾಗಿದ್ದುವು ಎಂದು ಇವುಗಳಿಂದ ತಿಳಿಯಬಹುದಾಗಿದೆ. ಸಹೋದರಿಯ ಮನೆಯಲ್ಲಿ ಪವಿತ್ರ ಖುರ್‌ಆನ್ ವಚನಗಳನ್ನು ಆಲಿಸಿದ ನಂತರ ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಹಝ್ರತ್ ಪೈಗಂಬರ್[ಸ]ರ ಸನ್ನಿಧಿಯಲ್ಲಿ ಹಾಜರಾದ ಘಟನೆ ಕೊನೆಯದಾಗಿರಬಹುದು.

(ಹಝ್ರತ್ ಉಮರ್[ರ]ರ ಪ್ರಸ್ತಾಪ ಮುಂದುವರೆಯುವುದು

ಎಂದು ಹೇಳಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಈ ಕೆಳಗಿನ ದಿವಂಗತರ ಬಗ್ಗೆ ಪ್ರಸ್ತಾಪಿಸುತ್ತಾ ಅವರೆಲ್ಲರಿಗಾಗಿ ಜನಾಝ ಗಾಇಬ್ ನಿರ್ವಹಿಸುವುದಾಗಿ ಹೇಳಿದರು: ಯಮನ್ ಜಮಾಅತಿನ ಸದರ್ ಆಗಿದ್ದ ಸನ್ಮಾನ್ಯ ಅಹ್ಮದ್ ಮುಹಮ್ಮದ್ ಉಸ್ಮಾನ್ ಶಬೂತಿ ಸಾಹಿಬ್, ಜಲ್ಸ ಸಾಲಾನ ಆಫೀಸಿನ ಅಕೌಂಟೆಂಟ್ ಆಗಿದ್ದ ಸನ್ಮಾನ್ಯ ಖುರೈಶಿ ಝಕಾಉಲ್ಲಾಹ್ ಸಾಹಿಬ್, ಕೆನಡದ ಸನ್ಮಾನ್ಯ ಮಲಿಕ್ ಖಾಲಿಕ್ ದಾದ್ ಸಾಹಿಬ್, ನಝಾರತ್ ಉಮೂರೆ ಆಮ್ಮದ ಉದ್ಯೋಗಿಯಾದ ಮುಹಮ್ಮದ್ ಸಲೀಂ ಸಾಹಿಬ್, ಅಮೇರಿಕದ ಸಾಹಿಬ್‌ಝಾದ ಮಹ್‌ದಿ ಲತೀಫ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ನಈಮ ಲತೀಫ್ ಸಾಹಿಬ, ಕೆನಡದ ಮುಹಮ್ಮದ್ ಶರೀಫ್ ಸಾಹಿಬ್‌ರ ಪತ್ನಿಯಾದ ಸಫಿಯ ಬೇಗಂ ಸಾಹಿಬ.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِىَ لَهٗ ـ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 23-04-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon